# ಹಂಪಿಯ ಶ್ರೀನಿವಾಸ

ಪುರಂದರದಾಸರ ಮಗ ಮಧ್ವಪತಿ, ಹಂಪಿಯ ಚಕ್ರತೀರ್ಥದ ಹತ್ತಿರ ಯಂತ್ರೋದ್ಧಾರಕನ ದೇವಸ್ಥಾನದ ಮೇಲೆ ಪ್ರತಿಷ್ಠಾಪಿಸಿದ ಶ್ರೀನಿವಾಸ ದೇವರ ಪ್ರತಿಮೆ ಇದು. ಹತ್ತಿರದಲ್ಲಿ ಕೋದಂಡರಾಮ ದೇವಸ್ಥಾನವಿದ್ದು, ಪಕ್ಕದಲ್ಲೇ ತುಂಗಭದ್ರಾ ನದಿ ಅಂಕುಡೊಂಕಾಗಿ ಹರಿಯುವ ದೃಶ್ಯ ಅಪೂರ್ವ!

—ಶ್ರೀಧರ ರಾಯಸಂ



# ಕಂಸಾಳೆ ಈ ನಾಡಿನ ಸಂಸ್ಕೃತಿ

ದಕ್ಷಿಣ ಕರ್ನಾಟದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಕಂಸಾಳೆ ಕಲೆಯು ಆಯಾ ಭಾಗದ ವಿಶಿಷ್ಟತೆ ಎತ್ತಿ ತೋರಿಸುತ್ತದೆ. ಜನಪದರ ಈ ಕಲೆ ಉಪಯುಕ್ತತೆಯೊಡನೆ ಕಲಾತ್ಮಕತೆ ಮೇಳೈಸತ್ತದೆ. ಚಾಮರಾಜನಗರ ಜಿಲ್ಲಾ ಆಡಳಿತ ಭವನದ ಎದುರಿಗಿರುವ ಈ ಶಿಲ್ಪ ಕಲಾಕಾರನ ಕೈಚಳಕಕ್ಕೆ ಕೈಗನ್ನಡಿಯಾಗಿದೆ.

—ಮನೀಷಾ ಪಾಟೀಲ, ವಿಜಯಪುರ





# ಸರ್ಕಸ್ ಪ್ರಚಾರಕ್ಕೆ ಆನೆಸಾಲು

65 ವರ್ಷಗಳ ಹಿಂದೆ (1955) ದುರ್ಗಕ್ಕೆ ಬಂದದ್ದು ಲೋಕ ಪ್ರಸಿದ್ಧ ಕಮಲ ತ್ರಿ ರಿಂಗ್ ಸರ್ಕಸ್. ಈಗ ದುರ್ಗದಲ್ಲಿ ಮನೋರಂಜನೆಗಾಗಿ ನಾಟಕಗಳು, ಸಿನಿಮಾಗಳು ಮಾತ್ರ. ವರ್ಷಕ್ಕೆ 2 ಅಥವಾ 3 ಬಾರಿ ಆಯೋಜಿಸುವ ಸರ್ಕಸ್‌ಗೆಂದು ವಾರದ ಮುಂಚಿತವಾಗಿಯೇ ಗೋಡೆಗಳ ಮೇಲೆ ಬಿತ್ತಿ ಚಿತ್ರಗಳು ರಾರಾಜಿಸಿದ್ದವು.

ದಾವಣಗೆರೆ ರಸ್ತೆ ನಮಾಜಿನ ದಿಬ್ಬ ನೋಡಲು ಅಲ್ಲಿ ಜನಸಾಗರ ಸೇರಿತ್ತು. ಸರ್ಕಸ್ ಪ್ರಾರಂಭಕ್ಕೆ ಮುನ್ನ ಜಗಮಗಿಸುವ ವರ್ಣಮಯ ವಿದ್ಯುತ್ ದೀಪಾಲಂಕಾರ, ಸಂಜೆ ಬಾನೆತ್ತರಕ್ಕೆ ಲೇಸರ್ ಕಿರಣ, ಹಳ್ಳಿ, ಪೇಟೆ ಜನ ಎನ್ನದೆ ನೋಡಿ ಆಶ್ಚರ್ಯಚಕಿತರಾಗುತ್ತಿದ್ದರು. ಅಗಾಧ ಗಾತ್ರದ ಡೇರೆ (ಟೆಂಟ್), ಅಸಂಖ್ಯಾತ ಆನೆಗಳು, ಕುದುರೆ ಒಂಟೆಗಳು, ಹುಲಿ, ಸಿಂಹ ಇತರ ಪ್ರಾಣಿಗಳು ನೂರಾರು ಕಲಾವಿದರು ಅದರಲ್ಲಿ ಹೆಂಗಳೆಯರು ಬಿಗಿ ಬಿಳಿ ಉಡುಪು ಅರ್ಧ ತೊಡೆಗೆ ಫ್ರಿಲ್ ಸ್ಕರ್ಟ್ ನೋಡುಗರಿಗೆ ಥ್ರಿಲ್ ಅನಿಸಿತ್ತು.

ಟಿಕೆಟ್‌ಗಾಗಿ ಸರತಿ ಸಾಲು. ಆಗ ಎತ್ತಿನ ಗಾಡಿ ಬಿಟ್ಟರೆ ಬೇರೆ ಮಾರ್ಗವಿಲ್ಲ. ಹಳ್ಳಿಗಳಿಂದ ನೂರಾರು ಗಾಡಿಗಳು ಸರ್ಕಸ್ ಟೆಂಟ್ ಸುತ್ತಲು ಮೊಕ್ಕಾಂ. ಸರ್ಕಸ್ ಪ್ರಚಾರ ವೈಖರಿ ಬಾಜಾಬಜಂತ್ರಿಯೊಂದಿಗೆ ಆನೆಗಳನ್ನು ರಾಜ ಬೀದಿಗೆ ತರುತ್ತಿದ್ದರು. ಪ್ರಾರಂಭಕ್ಕೆ ಕಲಾವಿದರೆಲ್ಲ ಮೂರು ವಿಭಾಗಗಳಾಗಿ ಶೃಂಗರಿಸಿದ ಆನೆ, ಕುದುರೆ, ರಾಜಪೋಷಾಕು ಧರಿಸಿ ಮಹಾ ಭಾರತದ ದೃಶ್ಯ ಹೋಲುವ ದೃಶ್ಯ. ಮಧುರವಾದ ಸರ್ಕಸ್ ಬ್ಯಾಂಡ್‌ನೊಂದಿಗೆ ಮುಖ್ಯವೇದಿಕೆಗೆ ಬಂದು ಮತ್ತೆ ನಿರ್ಗಮನ. ಆ ಅಪರೂಪದ ದೃಶ್ಯ ಕಂಡು ಪ್ರೇಕ್ಷಕರು ಕರತಾಡನ ಮೊಳಗಿಸಿದರು.

ಮೂರು ಮೂರೂವರೆ ಅಡಿಯ ಕುಬ್ಜ ಜೋಕರ್‌ಗಳು ಉದ್ದ ಟೋಪಿ ದೊಗಲೆ ಬಣ್ಣ ಬಣ್ಣದ ಬಟ್ಟೆ ತೊಟ್ಟು ನಕ್ಕು ನಗಿಸುತ್ತಿದ್ದರು. ಮಹಿಳೆಯ ಸಿಂಗಲ್ ವೀಲ್ ಪೆಡಲ್ ಮಾಡಿ ವೇದಿಕೆ ಸುತ್ತುವುದು. ಆನೆ ಕವಾಯತು, ಕುದುರೆ ಕವಾಯತು, ಹಂಟರ್ ಹಿಡಿದು ರಿಂಗ್ ಮಾಸ್ಟರ್‌ರಿಂದ ಹುಲಿ ಬೆಂಕಿ ರಿಂಗ್‌ನಲ್ಲಿ ಹಾರಿಸುವುದು. ಅಂತರಿಕ್ಷದಲ್ಲಿ ಜೋಕಾಲಿ ರೋಮಾಂಚನ, ಏಷ್ಯಾ ಖಂಡದಲ್ಲೇ ನಂಬರ್ 1 ಸರ್ಕಸ್ ಇದಾಗಿದ್ದು, ವಿದೇಶಿ ಪ್ರಯಾಣ ಹೋಗುವಾಗ ಸಮುದ್ರದಲ್ಲಿ ಮುಳುಗಿ ಪತನವಾಯಿತು ಎಂದು ಹೇಳುತ್ತಿದ್ದರು. ಬಾಲ್ಯದ ನೆನಪು ಮುಂದಿನ ಪೀಳಿಗೆಗಾಗಿ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.
ಇಮೇಲ್ ವಿಳಾಸ: editorsu@sudha.co.in